ತುಕ್ಕು ಹಿಡಿದ ಬೋರ್ಡ್





ಹಾಡಿಯ ಜನ



ಹಕ್ಕು ಪತ್ರ ತೋರಿಸುತ್ತಿರುವ ಹಾಡಿಯ ನಿವಾಸಿ

ಇರುವುದೇ ಇಲ್ಲಿ. ನಮಗೆ ಔಷಧೋಪಚಾರ ನೀಡುವುದೇ ಈ ಅರಣ್ಯ' ಎನ್ನುತ್ತಾರೆ ಈ ಆದಿವಾಸಿಗಳು. 'ನಮ್ಮ ಪಾರಂಪರಿಕ ಹಕ್ಕಿಗಾಗಿ 1996ರಿಂದಲೇ ಹೋರಾಟ ಮಾಡುತ್ತಿದ್ದೇವೆ. 2000 ಇಸವಿಯ ಕಾಯ್ದೆಯಡಿ ನಮಗೆ ಬದುಕುವ ಹಕ್ಕು ನೀಡಿ' ಎಂದು ನಾಗರಹೊಳೆ ಬುಡಕಟ್ಟು ಕೃಷಿಕರ ಸಂಘದ ಅಧ್ಯಕ್ಷ ಜೆ.ಕೆ. ತಿಮ್ಮ ಹೇಳುತ್ತಾರೆ.

ಮನೆ ಕಟ್ಟಲ್ ಬಿಡದಿಲ್ಲೆ..

'ನಮಗೆ ಮನೆ ಕಟ್ಟಬೇಕೆಂದರೂ ಇಲ್ಲಿ ಬಿಡುವುದಿಲ್ಲ, ವ್ಯವಸಾಯ ಮಾಡುವುದಕ್ಕೂ ಬಿಡುವುದಿಲ್ಲ. ಕಾಡಿನಿಂದ ಸೌದೆ ತರಲಿಕ್ಕೆ ಹೋದರೆ ಅಧಿಕಾರಿಗಳು ಹಿಂಸಿಸುತ್ತಾರೆ. ತಾತ್ಕಾಲಿಕ ಬಿದಿರಿನಿಂದ ಕಟ್ಟುವ ಸೂರೆಲ್ಲ ಮುರಿದು ಮೇಲಿನ ಚಾವಣಿ ಬೀಳುವಂತಹ ಪರಿಸ್ಥಿತಿ ಒಂದೆಡೆಯಾದರೆ, ಮಣ್ಣಿನಿಂದ ಮಾಡಿದ ಮನೆಯ ಗೋಡೆಗಳೆಲ್ಲ ಕುಸಿದು ಹೋಗಿ ಸೀರೆಯ ತುಂಡುಗಳೇ ಇಲ್ಲಿ ಸೂರಿನ ಗೋಡೆಗಳಾಗಿವೆ. ಸರಕಾರ ಅಕ್ಕಿ, ಮೊಟ್ಟೆ, ಬೇಳೆ, ಸಕ್ಕರೆ, ಸೀಮೆಣ್ಣೆ ನೀಡುತ್ತಿದ್ದರೂ ಇಲ್ಲಿ ನೆಮ್ಮದಿಯ ಬದುಕಿಲ್ಲ. ನಮ್ಮೆಲ್ಲರ ಒತ್ತಾಯಕ್ಕೆ ಮಣಿದು ಸಮಾಜ ಕಲ್ಯಾಣ ಇಲಾಖೆ ಹಾಗೂ ಐಟಿಡಿಪಿ ಸೋರುತ್ತಿರುವ ಸೂರಿಗೆ ಪ್ಲಾಸ್ಟಿಕ್ ಹೊದಿಕೆಯನ್ನು ನೀಡಿದ್ದರೂ, ಮಳೆಗಾಲದಲ್ಲಿ ಅದೂ ಪ್ರಯೋಜನವಿಲ್ಲ' ಎನ್ನುತ್ತಾರೆ ತಿಮ್ಮ.

ನಾಗರಹೊಳೆ ಗದ್ದೆಹಾಡಿ ಬುಡಕಟ್ಟು ಕೃಷಿಕರ ಸಂಘದ ನಾಯಕ ಎನ್ನಿಸಿಕೊಂಡಿರುವ ಅಧ್ಯಕ್ಷ ಜೆ.ಕೆ.ತಿಮ್ಮ ತಮ್ಮ ಪಾರಂಪರಿಕ ಮೂಲನೆಲೆಯ ಹಕ್ಕಿಗಾಗಿ ಹೋರಾಟ ನಡೆಸಲು ನೇತೃತ್ವ ನೀಡಿದ್ದಕ್ಕೆ ಪ್ರತಿಫಲವಾಗಿ ವನ್ಯಜೀವಿ ಸಂರಕ್ಷಣಾ ಕಾಯಿದೆ, ಅರಣ್ಯ ಕಾಯಿದೆಯಡಿ 11 ಸೆಕ್ಷನ್‌ಗಳನ್ನು ಜಡಿಯಲಾಗಿದೆ. 'ಪೊನ್ನಂಪೇಟೆಯ ನ್ಯಾಯಾಲಯಕ್ಕೆ ಈ ಮೊಕದ್ದಮೆಗಳ ಸಲುವಾಗಿ ಅಲೆದಾಡುತ್ತಿದ್ದೇನೆ. ನಿಮಗೆ ಈ ಜಾಗ ಸಿಗುವುದಿಲ್ಲ, ಹಣ ನೀಡುತ್ತೇವೆ, ಬೇರೆ ಕಡೆ ಒಳ್ಳೆಯ ಸೂರು ಕಟ್ಟಿಕೊಡುತ್ತೇವೆ.. ಎಂದೆಲ್ಲ ಆಮಿಷ ಒಡ್ಡಿ ಒತ್ತಾಯಪೂರ್ವಕವಾಗಿ ಹಲವು ಪತ್ರಗಳಲ್ಲಿ ಸಹಿ ತೆಗೆದುಕೊಂಡಿದ್ದಾರೆ. ನಾವೇ ಒಪ್ಪಿ ಅರಣ್ಯದಿಂದ ತೆರಳಿದ ಹಾಗೆಲ್ಲ ಅವರೇ ಬರೆದು ಬಾಂಡ್ ಪೇಪರಿನಲ್ಲಿ ಒತ್ತಾಯವಾಗಿ ಸಹಿ ಮಾಡಿಸಿಕೊಂಡಿದ್ದಾರೆ' ಎಂದೂ ತಿಮ್ಮ ಆರೋಪಿಸುತ್ತಾರೆ.

'ಚುನಾವಣೆಯ ಸಮಯದಲ್ಲಿ ಎಲ್ಲರೂ ಬರುತ್ತಾರೆ. ನಮ್ಮ ಸಮಸ್ಯೆಗಳ ಬಗ್ಗೆ ಹುಸಿ ಭರವಸೆಗಳನ್ನು ಕೊಡುತ್ತಾರೆ. ನಾವೂ ವೋಟ್ ಹಾಕಿ ಗೆಲ್ಲಿಸುತ್ತೇವೆ. ಆದರೆ ಆ ಬಳಿಕ ಇತ್ತ ತಿರುಗಿ ನೋಡುವುದೇ ಇಲ್ಲ' ಎನ್ನುವುದು ಈ ಜನರ ಆಕ್ರೋಶ. 'ಈ ಮಣ್ಣ್‌ಲ್... ಈ ನೆಲಲ್... ಬದ್‌ಕಲ್ ಅವಕಾಶ ಮಾಡಿಕೊಡಲಿ, ಇಲ್ಲಾಂದ್ರೆ ನಾವ್ ನಂಬಿದ ದೇವರ್ ನಿಮ್ಮ್‌ನ ಸುಮ್ಮನೆ ಬಿಡಾದ್..' ಎಂದು ನೋವಿನಿಂದ ಈ ಜೇನುಕುರುಬರು ಹಿಡಿಶಾಪ ಹಾಕುವಾಗ ಅವರ ಮಾತಿನಲ್ಲಿರುವ ನೋವು ಅರಿವಿಗೆ ಬರುತ್ತದೆ.